# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1494 |
| ಸದಸ್ಯರ ಹೆಸರು | ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 17.03.2021 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ನಗರೀಕೃತ ಪ್ರದೇಶಗಳಲ್ಲಿರುವ ಆಸ್ತಿಗಳಿಗೆ ಯಾವುದೇ ಅಧಿಕೃತ ಹಕ್ಕು ದಾಖಲೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿರುವ ಸುಮಾರು 276 ನಗರ ಸ್ಥಳೀಯ ಸಂಸ್ಥೆಗಳಲ್ಲಿ 48 ನಗರ/ಪಟ್ಟಣಗಳಲ್ಲಿ ಸನ್ 1930 ರಿಂದಲೇ ನಗರಮಾಪನದಡಿ ಹಕ್ಕುದಾಖಲೆಗಳನ್ನು ಸಿದ್ಧಪಡಿಸಿ ನಿರ್ವಹಿಸಲಾಗುತ್ತಿದೆ. ಆದರೆ, ತದನಂತರದಲ್ಲಿ ವಿಸ್ತೃತಗೊಂಡ ನಗರೀಕೃತ ಪ್ರದೇಶಗಳಿಗೆ ಹಕ್ಕುದಾಖಲೆಗಳನ್ನು ಸಿದ್ಧಪಡಿಸಲಾಗಿರುವುದಿಲ್ಲ. |
| ಆ) | ನಗರೀಕೃತ ಆಸ್ತಿಗಳಿಗೆ ಹಕ್ಕು ದಾಖಲೆ ನೀಡುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | 2010ರಿಂದ ಮೈಸೂರು, ಶಿವಮೊಗ್ಗ ಮತ್ತು ಮಂಗಳೂರು ನಗರಗಳಲ್ಲಿ ನಗರಾಸ್ತಿ ಮಾಲೀಕತ್ವದ ಹಕ್ಕು ದಾಖಲೆಗಳ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಇದರ ಸಾಧಕ ಬಾಧಕಗಳನ್ನು ಆಧರಿಸಿ, ರಾಜ್ಯಾದ್ಯಂತ ಹಂತ ಹಂತವಾಗಿ ವಿಸ್ತರಿಸಲು ಉದ್ದೇಶಿಸಲಾಗಿದೆ. |
| ಇ) | ನಗರೀಕೃತ ಆಸ್ತಿಗಳಿಗೆ ಹಕ್ಕು ದಾಖಲೆ ನೀಡಲು ಭೂಮಾಪನ (ಸರ್ವೆ) ಇಲಾಖೆಯಲ್ಲಿ ಪ್ರತ್ಯೇಕ ಶಾಶ್ವತ ವ್ಯವಸ್ಥೆ ಸೃಜಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ; ಹಾಗಿದ್ದಲ್ಲಿ, ಈ ಯೋಜನೆಯನ್ನು ಯಾವ ಕಾಲಮಿತಿಯೊಳಗೆ ತರಲಾಗುವುದು? (ವಿವರ ನೀಡುವುದು) | ಇಲಾಖೆಯಲ್ಲಿ ತಾಂತ್ರಿಕ ಸಿಬ್ಬಂದಿಯು ಗ್ರಾಮೀಣ ಪ್ರದೇಶದ ಭೂಮಾಪನ ಕಾರ್ಯ ಹಾಗೂ ಜಾರಿಯಲ್ಲಿರುವ ನಗರಮಾಪನ ಕಛೇರಿಗಳಲ್ಲಿ ನಗರಮಾಪನ ಕಾರ್ಯವನ್ನು ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಮುಂಬರುವ ದಿನಗಳಲ್ಲಿ ನಗರಮಾಪನವನ್ನು ರಾಜ್ಯಾದ್ಯಂತ ವಿಸ್ತರಿಸಿದಲ್ಲಿ ಈ ಯೋಜನೆಯನ್ನು ಪ್ರತ್ಯೇಕ ಮೇಲುಸ್ತುವಾರಿಯಲ್ಲಿ ನಿರ್ವಹಿಸುವ ಬಗ್ಗೆ ಕ್ರಮವಹಿಸಲಾಗುವುದು. |

**ಸಂಖ್ಯೆ: ಕಂಇ 49 ಎಸ್ಎಸ್‌ಸಿ 2021**

**(ಆರ್. ಅಶೋಕ)**
ಕಂದಾಯ ಸಚಿವರು